# ಬಂಗಾರಪ್ಪನವರಿಗೊಂದು ಪತ್ರ

ಪ್ರಿಯ ಶ್ರೀ ಬಂಗಾರಪ್ಪ,

ರೈತ ಚಳುವಳಿಯ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ನಾನು ಹೇಳಿದ ಯಾವ ಮಾತನ್ನೂ ಸರಕಾರ ಗಂಭೀರವಾಗಿ ಕಾಣದಿರುವುದು ಕನಿಕರದ ಸಂಗತಿ. ಉದಾಹರಣೆಗೆ ಸಕ್ಕರೆ ಉತ್ಪಾದನೆಯ ಸರಾಸರಿ ವೆಚ್ಚ ಪ್ರತಿ ಕೆ. ಜಿ.ಗೆ ರೂ 2–50 ಕ್ಕಿಂತ ಹೆಚ್ಚಿಲ್ಲ ಎಂದು ನಾನು ಹಲವು ಬಾರಿ ಹೇಳಿದ್ದೆ. ಈ ವೆಚ್ಚದ ಅಂದಾಜು ವಿವರಗಳು ಹೀಗೆ :

| | ರೂ | |
|---|---|---|
| ಕಬ್ಬು ಬೆಳೆಯುವ ಖರ್ಚು : ರೂ 1.20 | .60 | 1.20 |
| ಬೇಸಾಯ ಹಾಗೂ ಬೇಸಾಯಗಾರನ ಪಾಲು ಸೇರಿ | .60 | |
| ಮಜೂರಿಗಾಗಿ ಸಮಾರು (ಅಧಿಕಾರಿಗಳ ಸಂಬಳ ಹಾಗೂ ಕೆಲಸಗಾರರ ಕೂಲಿ ಸೇರಿ) | .30 | 0.30 |
| ಉತ್ಪಾದನಾ ವೆಚ್ಚ : ಬಾಡಿಗೆ, ದರ, ತೆರಿಗೆ, ಉಗ್ರಾಣ, ಶಕ್ತಿ ಸೇರಿ | 1.00 | 1.00 |
| | ಒಟ್ಟು | 2.50 |

ಕಾರ್ಖಾನೆಗಳಲ್ಲಿ ಉತ್ಪಾದಿತವಾಗುವ ಸಕ್ಕರೆಯ ಶೇ. 35 ಭಾಗವನ್ನು ಮುಕ್ತವಾಗಿ ಮಾರಬಹುದು. ಉಳಿದ ಶೇ. 65 ಭಾಗ ಲೆವಿ ಸಕ್ಕರೆ ಎಂದು ಪರಿಗಣಿತವಾಗಿ ನ್ಯಾಯ ಬೆಲೆ ಮಾರುಕಟ್ಟೆಗೆ ಒದಗುತ್ತದೆ. ಆದರೆ ಈ ಶೇ. 65 ರ ಅರ್ಧಭಾಗ ನ್ಯಾಯ ಬೆಲೆ ಅಂಗಡಿಗಳ ಹಂದರದಲ್ಲಿ ಹುದುಗಿರುವ ಲಾಭಕೋಟದ ದೆಸೆಯಿಂದ ಮುಕ್ತ ಮಾರುಕಟ್ಟೆಯನ್ನು ಸೇರುವುದು ಗುಟ್ಟಿನ ಸಂಗತಿಯಲ್ಲ. ಪರಿಣಾಮ ಒಟ್ಟು ಉತ್ಪಾದನೆಯ ಶೇ. 60 ರಿಂದ ಶೇ 65 ಭಾಗ ಸಕ್ಕರೆ ಕೆಜಿಗೆ ರೂ 6ರಿಂದ ರೂ 7 ರ ವರೆಗಿನ ದರದಲ್ಲಿ ಮುಕ್ತವಾಗಿ ಮಾರಲ್ಪಡುತ್ತದೆ. ಉಳಿದ ಶೇ. 35ರಿಂದ 40 ಭಾಗ ಮಾತ್ರ

ನ್ಯಾಯ ಬೆಲೆ ಅಂಗಡಿಯಲ್ಲಿ ಕಿಲೋಗೆ ರೂ 2.85ರ ಬೆಲೆಗೆ ದೊರಕುತ್ತದೆ, ನೀವು ಮೂಟೆಯ ಮೊತ್ತವನ್ನು ಲೆಕ್ಕ ಹಾಕಿಕೊಳ್ಳಿ. ನನ್ನ ಈ ಅಂಕಿ ಸಂಖ್ಯೆಗಳು ನಿಖರವಾದವು ಎಂದು ನಿರೂಪಿಸಲು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವರದಿಯಾದ ತಾ. 14. ಮಾರ್ಚ್ ನವದೆಹಲಿಯ ಸುದ್ದಿಯೊಂದನ್ನು ಉದ್ಧರಿಸುತ್ತೇನೆ :

"ಮಹಾರಾಷ್ಟ್ರ ಸಕ್ಕರೆ ಉತ್ಪಾದಕ ಸಹಕಾರ ಸಂಘಗಳು ಸಕ್ಕರೆ ದರಗಳನ್ನು ಸ್ಥಿರಗೊಳಿಸಲು, ತಮ್ಮಲ್ಲಿರುವ ದಾಸ್ತಾನು ಸರಕನ್ನು ಕ್ವಿಂಟಾಲಿಗೆ ರೂ 300/-ರ ದರದಲ್ಲಿ ಸರಕಾರಕ್ಕೆ ಮಾರಲು ಸಿದ್ಧವಿರುವುದಾಗಿ ಹೇಳಿವೆ"

ಕಾರ್ಖಾನೆಗಳೇ ರೂ 300-ಕ್ಕೆ ಮಾರಲು ಸಿದ್ಧವಿರುವಾಗ ಉತ್ಪಾದನಾ ವೆಚ್ಚ ರೂ 250 ಕ್ಕಿಂತ ಹೆಚ್ಚಿರುವುದು ಸಾಧ್ಯವಿಲ್ಲ. ಪ್ರಶ್ನೆ ಏನೆಂದರೆ, ಉಳಿದ ಮೂಟೆ ಎಲ್ಲಿಗೆ ಹೋಗುತ್ತದೆ ? ಸರಕಾರ ತನ್ನ ಬಳಿ ಉತ್ತರವಿದ್ದರೆ ಸಾರ್ವಜನಿಕರಿಗೆ ತಿಳಿಸಬೇಕು. ನಾನು ಒಂದು ಕಿಲೋ ಅಕ್ಕಿಯ ಉತ್ಪಾದನೆಯ ವಿವರ ಸಹ ಹೇಳಿದ್ದೆ. ಒಂದು ಎಕರೆ ನೀರಾವರಿ ನೆಲದಲ್ಲಿ ಸರಾಸರಿ ಹದಿನೈದು ಕ್ವಿಂಟಾಲು ಭತ್ತ ಅಥವಾ ಹತ್ತು ಕ್ವಿಂಟಾಲು ಅಕ್ಕಿ ಉತ್ಪತ್ತಿಯಾಗುತ್ತೆ ಅಂದುಕೊಂಡರೆ, ಅದರ ಖರ್ಚಿನ ವಿವರಗಳು

| ಪ್ರತಿ ಕೆ.ಜಿ ಅಕ್ಕಿಗೆ : | ರೂ |
|---|---|
| ನೆಲಕಂದಾಯ ನೀರುಕಂದಾಯ ಅಭಿವೃದ್ಧಿ ತೆರಿಗೆ ಇತ್ಯಾದಿಗಳಿಗಾಗಿ | 0.10 |
| ಗೊಬ್ಬರ, ಕ್ರಿಮಿನಾಶಕ, ಬೀಜ, ಪಶುಆಹಾರ, ಇತ್ಯಾದಿಗಳಿಗಾಗಿ | 0.70 |
| ಬೇಸಾಯ, ಕೊಯಿಲು, ಕಣಬಡಿಯುವುದು ಇತ್ಯಾದಿಗಳ ಕೂಲಿ | 0.50 |
| ಸಾಲದ ಮೇಲಿನ ಬಡ್ಡಿ ಸಾಲದ ಮರುಪಾವತಿಗಳಿಗೆ | 0.15 |
| ನೇಗಿಲು ಗಾಡಿ ಎತ್ತುಗಳ ಬಳಕೆಯಿಂದ ಆಗುವ ದಳಸವೆತಕ್ಕೆ | 0.10 |
| ಮಧ್ಯವರ್ತಿ, ಸಾರಿಗೆ, ಗಿರಣಿ, ತೆರಿಗೆ, ಚಿಲ್ಲರೆ ವ್ಯಾಪಾರಿ ಮುಂತಾದವರಿಗೆ | 0.75 |
| ರೈತನಿಗೆ ಉಳಿಯುವುದು | 0.20 |
| ಪ್ರತಿ ಕಿಲೋ ಅಕ್ಕಿಯ ಉತ್ಪಾದನಾ ವೆಚ್ಚ | 2.50 |

ನೀವು ನನ್ನ ಅಂದಾಜನ್ನು ಒಪ್ಪದಿದ್ದರೆ ಬೇರೆ ಸಂಖ್ಯಾ ವಿವರಗಳನ್ನು ಲೆಕ್ಕಹಾಕಿ ರೈತನಿಗೆ ಕಿಲೋ ಅಕ್ಕಿಗೆ ಇಪ್ಪತ್ತು ಪೈಸೆಗಿಂತ ಹೆಚ್ಚು ದೊರೆಯುವುದೆಂದು ತೋರಿಸಿ. ಇದೇ ರೀತಿಯ ಸಂಖ್ಯಾ ವಿವರಗಳನ್ನು ಆಹಾರತೈಲ ಮತ್ತು ಹತ್ತಿಯಂತಹ ಬೇರೆ ಸರಕುಗಳಿಗೂ ತಯಾರಿಸಬೇಕು. ಮುಖ್ಯವಾದ ಮಾತೆಂದರೆ ಭತ್ತ, ಸಕ್ಕರೆ, ಎಣ್ಣೆ ಅಥವಾ ಹತ್ತಿಯ ಬೆಳೆಗಾರ ಬೇರೆಯವರ ಹೊಟ್ಟೆ ತುಂಬಿಸಲು ಯಾಕೆ ಇಷ್ಟು ಕಡಿಮೆ

ಪ್ರತಿಫಲಕ್ಕೆ ಒದ್ದಾಡಬೇಕು ಎನ್ನುವುದು. ಜೊತೆಗೆ ಬಳಕೆದಾರನನ್ನೂ ಹಿಂಡಿ ಹಾಕಿ ಆವನನ್ನು ರೈತನ ವಿರುದ್ಧ ಎತ್ತಿ ಕಟ್ಟಲಾಗುತ್ತದೆ. ನಿಮಗೇ ಗೊತ್ತಿರುವಂತೆ ಇದನ್ನು ಡಾ. ಲೋಹಿಯಾ "ಬೆಲೆ ಕೊಳ್ಳೆ" ಎಂದು ಬಹಳ ವರ್ಷಗಳ ಹಿಂದೆಯೇ ಹೆಸರಿಸಿದ್ದರು. ನೀವು ಪ್ರಸಕ್ತ ಚಳುವಳಿಯನ್ನು ಹತ್ತಿಕ್ಕಲು ಕಣ್ಣೊರೆಸಬಹುದು, ಆದರೆ ನೀವು ಮೂಲ ಭೂತ ಪ್ರಶ್ನೆಗಳನ್ನು ಪರಿಹರಿಸಲೆತ್ನಿಸುವುದರಿಂದ ಮಾತ್ರ ಒಂದು ಅರ್ಥಪೂರ್ಣ ಪರಿಹಾರ ದೊರಕುವುದು.

ರೈತರು ಬಳಕೆದಾರರು ಪ್ರತಿನಿಧಿಗಳೊಡನೆ ಚರ್ಚೆನಡೆಸಿ, ಘರ್ಷಣೆಯ ಅಂಶ ಗಳನ್ನು ಗುರುತಿಸಿ ಎಲ್ಲರೂ ಒಪ್ಪಿಕೊಳ್ಳುವ ಸಮಾಧಾನಗಳನ್ನು ಹುಡುಕುವ ಹೊಸ ಜನ ತಾಂತ್ರಿಕ ಸಂಸ್ಕೃತಿಯನ್ನು ಲಕ್ಷ್ಯಕ್ಕೆತೆಗೆದುಕೊಳ್ಳದೆ ಸರಕಾರ ರಾಜೋದಾರ್ಯದಿಂದ ಏಕಪಕ್ಷೀಯವಾಗಿ ಪರಿಹಾರಗಳನ್ನು ಘೋಷಿಸುವ ಪಾಳೆಗಾರಿಕೆ ಕ್ರಮ ನನಗೆ ಅರ್ಥ ವಾಗುವುದಿಲ್ಲ. ಸರಕಾರ ಆಕಾಶದಲ್ಲಿ ನಿಂತು ಬಳಕೆದಾರರನ್ನು, ರೈತರನ್ನೂ ನಿಕೃಷ್ಟವಾಗಿ ನೋಡುತ್ತಾ ಅವರೊಡನೆ ಪತ್ರಿಕೆಗಳ ಮುಖಾಂತರ ಸಂವಾದಿಸುವ ಕ್ರಮ ತಪ್ಪಬೇಕು ಮತ್ತು ರೈತರ, ಬಳಕೆದಾರರನ್ನು ಪ್ರತಿನಿಧಿಸುವ ಸಂಸ್ಥೆಗಳ ಸಾಮುದಾಯಿಕ ವ್ಯಕ್ತಿತ್ವ ವನ್ನು ಸರಕಾರ ಗುರುತಿಸಿ ಕಾರ್ಮಿಕ ಸಂಸ್ಥೆಗಳೊಡನೆ ಈಗ ನೇರವಾಗಿ ಚರ್ಚಿಸುವಂತೆ ಈ ಸಂಸ್ಥೆಗಳೊಡನೆ ಸಹ ಮಾತುಕತೆ ನಡೆಸಬೇಕು, ಇದು ಸರಕಾರದ ಜವಾಬ್ದಾರಿ.

ರೈತರು, ಕಾರ್ಮಿಕರು ಮತ್ತು ಬಳಕೆದಾರರ ಚಳುವಳಿಗಳ ಮೂಲಕ ಎತ್ತಲಾಗುವ ಸಾಮಾಜಿಕ, ಆರ್ಥಿಕ ಪ್ರಶ್ನೆಗಳನ್ನು ಎದುರಿಸಲು ಪೋಲಿಸರನ್ನು ಬಳಸುವ ಕ್ರಮವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ.

ಪೋಲಿಸರ ವರ್ಗ ಪೂರ್ವಾಗ್ರಹಗಳು, ಪೋಲಿಸ್ ಠಾಣೆಗಳಲ್ಲಿ ಆರೋಪಿಗಳ ಕಾನೂನುಬದ್ಧ ಹಕ್ಕುಗಳ ಉಲ್ಲಂಘನೆ, ದಾಖಲೆಗಳನ್ನು, ತಿದ್ದಿಕೊಳ್ಳಲು ಅವರು ನಡೆಸುವ ನಾಚಿಗೆಗೇಡಿ ಸಾಕ್ಷ್ಯಾಧಾರಗಳನ್ನು ಫಿತೂರಿನಡೆಸಿ ಹಣಮಾಡಿಕೊಳ್ಳಲು ಬಯಸುವುದನ್ನು ನಾನು ಖಂಡಿಸುತ್ತೇನೆ. ಕಾರ್ಮಿಕರನ್ನು ಬಳಕೆದಾರರು, ಉತ್ಪಾದಕರು ಕೂಲಿ, ಬೆಲೆ, ಅಥವಾ ಆದಾಯಗಳಿಗಾಗಿ ಹೋರಾಟ ನಡೆಸಿದಾಗ ಅವರ ವಿರುದ್ಧ ಪೋಲೀಸರನ್ನು ಬಳಸುವುದು ಎಂಥ ಅಸಂಬದ್ಧ ! ಈ ಪೋಲಿಸರು ಇದಕ್ಕಾಗಿಯೇ ಇದ್ದಾರೆಯೇ, ಇದಕ್ಕೆ ಪರಿಹಾರ ಸೂಚಿಸಬಲ್ಲರೇ ? ಸಾಮಾಜಿಕ ಆರ್ಥಿಕ ಸಮಸ್ಯೆಗಳ ಪರಿವರ್ತನೆಗೆ, ಮೂಲಭೂತ ಬದಲಾವಣೆಗಳಾಗದೆ, ಅಭಿವೃದ್ಧಿ ಸಾಧಿಸುವುದು ಅಥವಾ ಕಾನೂನು ಶಿಸ್ತು ಪಾಲಿಸುವುದು ಹೇಗೆ ಸಾಧ್ಯ ? ಈ ದಿನದ ಸವಾಲುಗಳು ಅಭಿವೃದ್ಧಿಗೆ ಸಂಬಂಧಪಟ್ಟ ವಾಗಿರುವಾಗ ಪೋಲಿಸರು ಕಾನೂನು ಮತ್ತು ಶಿಸ್ತನ್ನು ಪಾಲಿಸಬೇಕು. ಅದೂ ಅತಿರೇಕದ ಕ್ರಮಗಳಿಂದ ! ಪೋಲಿಸರಿಗೆ ಸಾರ್ವಜನಿಕ ಸಮಸ್ಯೆಗಳ ನಡುವೆ ತಲೆ ಹಾಕುವ ಅವಶ್ಯಕತೆ

ಚೂ…

ಯಿಲ್ಲ. ಅವರನ್ನು ಎಲ್ಲರೀತಿಯ ಚಳುವಳಿಗಳ ಎದುರಿಗೆ ಒಡ್ಡುವುದರಿಂದ ಅವರು ವಿವೇಚನೆ ಕಳೆದುಕೊಂಡು ಪರಿಸ್ಥಿತಿ ಹದಗೆಡಿಸಿ ಜನರನ್ನು ಕೊಲ್ಲುತ್ತಾರೆ. ಚಳುವಳಿಗಳು ಬೆಳೆಯುತ್ತವೆ. ಈ ಪರಿಸ್ಥಿತಿ ಎದುರಿಸಲು ಯಾವ ರೀತಿಯ ತಯಾರಿಯನ್ನೂ ಹೊಂದಿರದ ಮತ್ತು ಅವರ ಶಿಕ್ಷಣದಿಂದಲೇ ಅಸಮರ್ಥರಾಗಿರುವ ಪೋಲೀಸರು, ಮುಖ್ಯವಾಗಿ ಕೆಳಗಿನ ದರ್ಜೆಯ ಪೋಲಿಸರು ಬಲಿಪಶುಗಳಾಗಿ ಹೆಸರು ಕಳೆದುಕೊಳ್ಳುತ್ತಾರೆ. ಅವರು ಹೊಡೆದರೂ ಅಯೋಗ್ಯರೇ ಹೊಡೆಯದಿದ್ದರೂ ಅಯೋಗ್ಯರೆ ಅವರ ಅತಿರೇಖಗಳನ್ನು ಕ್ಷಮಿಸಬೇಕೆಂದು ಇದರ ಅರ್ಥವಲ್ಲ. ವಾಸ್ತವವಾಗಿ ಅವರ ವಿಕೃತ ಒರಟು ದಮನ ಕ್ರಿಯೆಗಳನ್ನು ನಾನು ಖಂಡಿಸುತ್ತೇನೆ. ಇವೆಲ್ಲವೂ ಪರಿವರ್ತಿತವಾಗಬೇಕು, ಸರಕಾರ ಈ ಬಗ್ಗೆ ಏನನ್ನೂ ಮಾಡಿಲ್ಲ ಮತ್ತು ಈಗಿರುವಂಥ ಸರಕಾರ ಏನನ್ನೂ ಮಾಡಲಾರದು ಸಹ. ಆದರಿಲ್ಲಿ ನಾನು ಬೇರೊಂದು ವಿಷಯದ ಬಗ್ಗೆ ಗಮನ ಸೆಳೆಯುತ್ತಿದ್ದೇನೆ. ಅದು ಸಾಮಾಜಿಕ ಆರ್ಥಿಕ ಪರಿಹಾರಗಳನ್ನು ಬಯಸುವ ಸಾಮಾಜಿಕ ಆರ್ಥಿಕ ಹೋರಾಟಗಳ ಸಂದರ್ಭದಲ್ಲಿ ಪೋಲಿಸರು ಯಾವ ರೀತಿ ವರ್ತಿಸಬೇಕು ಎನ್ನುವುದು. ಆದರೆ, ಸ್ಥಳೀಯ ಪೋಲಿಸರು ಮಿತಿ ಮೀರಿ ವರ್ತಿಸಿದಾಗ ನ್ಯಾಯಾಂಗ ತನಿಖೆ ಅತ್ಯಗತ್ಯವಾಗುತ್ತದೆ.

ನಿಮ್ಮ ಸರಕಾರ ಅಧಿಕಾರಕ್ಕೆ ಬಂದದ್ದು ಬೆಲೆ ಸ್ಥಿರತೆಯ ಭರವಸೆಯಿಂದ. ಆರು ತಿಂಗಳ ಕಾಲ ಕಾದು ನಿಮ್ಮ ಪೊಳ್ಳುತನವನ್ನು ಕಂಡುಕೊಂಡ ಜನತೆ ಅಭೂತಪೂರ್ವ ಚಳುವಳಿ ಹೂಡುತ್ತಿದ್ದಾರೆ. ಇದನ್ನು ವಿಧಾನಸಭೆಯಲ್ಲಿ ಯಜಮಾನಿಕೆ ಮಾತಾಡುತ್ತ ಎದುರಿಸುವುದಕ್ಕೆ ಬದಲು ಜನತೆಯ ಪ್ರತಿನಿಧಿಗಳನ್ನು ಚಳುವಳಿಯ ವಕ್ತಾರರನ್ನು ಕರೆದು ಎದುರು ಎದುರು ಮಾತಾಡಿ ಪರಿಹರಿಸಬೇಕಿತ್ತು.

ಈ ಪತ್ರವನ್ನು ನಾನು ಬರೆದಿದ್ದು, ಸರಕಾರದ ವಕ್ತಾರರು ರೈತಚಳುವಳಿ ಮತ್ತು ಬಳಕೆದಾರರ ಚಳುವಳಿಯ ಬಗ್ಗೆ ಚರ್ಚೆ ನಡೆದ ಸಂದರ್ಭದಲ್ಲಿ, ನಾನು ಎತ್ತಿದ ಕೆಲವು ಪ್ರಶ್ನೆಗಳನ್ನು ಜಾರಿಸಿದ್ದುದರಿಂದ, ಕಡೆಯದಾಗಿ, ನೀವು ವಿಧಾನ ಮಂಡಲಿಯಲ್ಲಿ ಮಾತು ಕೊಟ್ಟಿದ್ದಂತೆ ಶೀಘ್ರವಾಗಿ ರಾಜ್ಯಮಟ್ಟದ ರೈತರ ಆರ್ಥಿಕ ಸಮ್ಮೇಳನವನ್ನು (ರಾಜಕೀಯ ಪಕ್ಷ ಸಮ್ಮೇಳನವನ್ನಲ್ಲ) ಕರೆದು ಬೇಸಾಯಗಾರರ ಸಮಸ್ಯೆಗಳನ್ನು ಚರ್ಚಿಸಬೇಕೆಂದು, ಮತ್ತು ಬೆಲೆಏರಿಕೆ, ಅಭಾವ, ಕಲಬೆರಕೆ ಇವುಗಳನ್ನು ಚರ್ಚಿಸಲು ಶೀಘ್ರವಾಗಿ ರಾಜ್ಯಮಟ್ಟದ ಬಳಕೆದಾರರ ಪ್ರತಿನಿಧಿಗಳ ಸಮ್ಮೇಳನವನ್ನು ಕರೆಯಬೇಕೆಂದು ಒತ್ತಾಯಿಸುತ್ತೇನೆ.

ನಿಮ್ಮ ವಿಶ್ವಾಸಿ

**ಎಸ್. ವೆಂಕಟರಾವ್**

ಶೂದ್ರ